ದಿನಾಂಕಃ 14.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರಿಂದ:**

1. ನಿಪಿ-11 ರಿಂದ 13 ರ ಫೋಟೋದಲ್ಲಿ ಕಾಣುವ ಬೇಲಿಯನ್ನು ಹೊಸದಾಗಿ ಮಾಡಿರುತ್ತೀರ ಎಂದರೆ? ಹಳೇಯ ಬೇಲಿಯನ್ನು ರೆಡಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

2. ನ್ಯಾಯಾಲಯದಿಂದ ಆದೇಶ ಪಡೆದ ಮೇಲೆ ಸದರಿ ಬೇಲಿಯನ್ನು ನಿರ್ಮಾಣ ಮಾಡಿರುತ್ತೀರ ಎಂದರೆ ಸರಿಯಲ್ಲ.

3. ನಿಪಿ-11 ರಲ್ಲಿ ನಿಮ್ಮ ಪೇಪರ್ ಯಾವುದು ಎಂದರೆ? ನನಗೆ ಕಣ್ಣು ಕಾಣುವುದಿಲ್ಲ ಎಂದು ನುಡಿಯುತ್ತಾರೆ.

4. ನೀವು ಹೊಸದಾಗಿ ಬೇಲಿ ಮಾಡಿರುವ ಬಗ್ಗೆ ಪ್ರತಿವಾದಿಗಳು ನಿಮ್ಮ ವಿರುದ್ಧ ಪೋಲಿಸ್ ರವರಿಗೆ ದೂರನ್ನು ನೀಡಿದ್ದಾರೆ ಎಂದರೆ? ಸರಿಯಲ್ಲ. ಇರಬಹುದು.

5. ನೀವು ಕೋರ್ಟ್ ಗೆ ಕೊಟ್ಟಿರುವ ಬಗ್ಗೆ ನಾನು ತಿಳಿದುಕೊಂಡಿದ್ದೇನೆ.

6. ನಂಜಮ್ಮ ಕೋಂ ಕಲ್ಲೇಗೌಡ ಯಾರು ಎಂದು ನನಗೆ ಗೊತ್ತಿಲ್ಲ.

7. ಲಕ್ಷ್ಮಣಗೌಡರವರು, ಕಲ್ಲೇಗೌಡರವರು ಅಣ್ಣ ತಮ್ಮಂದಿರು ಎಂದರೆ? ಇರಬಹುದು, ನನಗೆ ನೆನಪಿಲ್ಲ.

8. ನಿಪಿ-20 ಇಂಡೆಕ್ಸ್ ಆಫ್ ಲ್ಯಾಂಡ್ ರಂತೆ ಸ.ನಂ.40 ರಲ್ಲಿ 12 ಎಕರೆ 27 ಗುಂಟೆ ಇದೆ ಎಂದರೆ ಸರಿ. ಅದರಲ್ಲಿ 1 ಎಕರೆ 27 ಗುಂಟೆ ಕರಾಬು ಇದೆ ಎಂದರೆ? ನನಗೆ ಗೊತ್ತಿಲ್ಲ.

9. ಬಕ್ಕಿಗ್ರಾಮದ ಸ.ನಂ.40 ರಲ್ಲಿ 5 ಎಕರೆ 20 ಗುಂಟೆ ನಿಮ್ಮ ತಂದೆ ಲಕ್ಷ್ಮಣಗೌಡರವರ ಹೆಸರಿನಲ್ಲಿ ಪಹಣಿ ಇದೆ ಎಂದರೆ ನನಗೆ ಗೊತ್ತಿಲ್ಲ.

10. ಸ.ನಂ.40 ರಲ್ಲಿ 12 ಎಕರೆ 27 ಗುಂಟೆಯಲ್ಲಿ 1 ಎಕರೆ 27 ಗುಂಟೆ ಹೋಗಿ ನಿಮ್ಮ ಕುಟುಂಬಕ್ಕೆ 5 ಎಕರೆ 20 ಗುಂಟೆ ಉಳಿದಿತ್ತು ಎಂದರೆ? ನಮ್ಮ ತಂದೆಯವರಿಗೆ 6 ಎಕರೆ 23 ಗುಂಟೆ ಬಂದಿತ್ತು ಎಂದು ನುಡಿಯುತ್ತಾರೆ.

11. ನಾನು ಸರ್ವೇಯರ್ ಗೆ ಸರ್ವೇ ಮಾಡಲು ಅರ್ಜಿ ಕೊಟ್ಟಿರುತ್ತೇನೆ. ಸರ್ವೇಯರ್ ರವರು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ನೀವು ಅನುಭವದಲ್ಲಿ ವ್ಯತ್ಯಾಸ ಇದೆ ಎಂದು ಆ ಸರ್ವೇಯರ್ ರವರ ಮುಂದೆ ಹೇಳಿಕೆ ಕೊಟ್ಟಿದ್ದೀರ ಎಂದರೆ ಸರಿಯಲ್ಲ. ನೀವು ಆ ಸಂದರ್ಭದಲ್ಲಿ ನಕ್ಷೆಯನ್ನು ತಯಾರು ಮಾಡಲು ಸರ್ವೆಯರ್ ರವರಿಗೆ ಹೇಳಿದ್ದೀರ ಎಂದರೆ ಸರಿಯಲ್ಲ.

12. ನಿಮಗೆ 6 ಎಕರೆ 23 ಗುಂಟೆ ಸ.ನಂ.40 ರಲ್ಲಿ ಇಲ್ಲ ಎಂದರೆ ಸರಿಯಲ್ಲ.

13. ಅಶೋಕ ಮತ್ತು ಇಂದ್ರೇಶ್ ರವರು ಹೇಳಿದ್ದಕ್ಕೆ ತಾಲ್ಲೂಕು ಆಫೀಸ್ ನಲ್ಲಿ ಖಾಲಿ ಪೇಪರ್ ಗೆ ಸಹಿ ಮಾಡಿರುತ್ತೇನೆ.

14. ನೀವು 3 ಎಕರೆ 15 ಗುಂಟೆಯಲ್ಲಿ ಮಾತ್ರ ಸ್ವಾಧೀನ ಇದ್ದೀರ ಎಂದರೆ ಸರಿಯಲ್ಲ. ನೀವೆ ಸರ್ವೇ ದಾಖಲೆಗಳನ್ನು ತಯಾರು ಮಾಡಿಸಿದರೂ ಸಹಾ ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ದಿ.20.10.1993 ನೇ ಸಾಲಿನಲ್ಲಿ ನಾವು ವಿಭಾಗ ಮಾಡಿಕೊಂಡಿರುವುದಕ್ಕೆ ನಮ್ಮ ಕುಟುಂಬದವರೆಲ್ಲ ಸಹಿ ಮಾಡಿದ್ದೀರ ಎಂದರೆ? ಲಕ್ಷ್ಮಣಗೌಡರವರ ಮೂರು ಜನ ಗಂಡು ಮಕ್ಕಳು ಮಾತ್ರ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ನಾವೆಲ್ಲ ಈಗ ಅನ್ಯೂನ್ಯವಾಗಿದ್ದೇವೆ.

16. ನಿಮ್ಮ ಕುಟುಂಬದ ಮಧ್ಯೆ ಯಾವುದೇ ಸಿವಿಲ್ ವ್ಯಾಜ್ಯ ಇಲ್ಲ.

17. ರತ್ನಮ್ಮ ನನ್ನ ಅಕ್ಕ. ಅವರು ನಿಮ್ಮ ವಿರುದ್ದ ವಿಭಾಗಕ್ಕಾಗಿ ದಾವ ಸ್ವತ್ತಿನ ಜೊತೆ ಇತರ ಸ್ವತ್ತುಗಳ ಮೇಲೆ ಅ.ದಾ.ಸಂ.38/2025 ರಂತೆ ದಾವ ಹೂಡಿದ್ದಾರೆ ಎಂದರೆ ಸರಿ.

18. ನಿಪಿ-2 ರಂತೆ ತಹಶೀಲ್ದಾರ್ ಕಚೇರಿಯಲ್ಲಿ ನ್ಯಾಯಾಲಯದ ಆದೇಶದಂತೆ ಖಾತೆ ಮಾಡಿದ್ದಾರೆ ಎಂದರೆ? ನನಗೆ ನೆನಪಿಲ್ಲ. ಸದರಿ ಆದೇಶವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರ ಎಂದರೆ? ಗೊತ್ತಿಲ್ಲ.

19. ಅ.ದಾ.ಸಂ.66/1995 ರಲ್ಲಿ ದಾವ ಸ್ವತ್ತು ಸೇರಿರಲಿಲ್ಲ ಎಂದರೆ? ನನಗೆ ಮರೆತು ಹೋಗಿದೆ.

20. ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಿಪಿ-2 ಎಂ.ಆರ್. ನ್ನು ಸೃಷ್ಟಿಸಿದ್ದೀರ ಎಂದರೆ ಸರಿಯಲ್ಲ.

21. ಪ್ರತಿವಾದಿಗಳ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

22. 3 ನೇ ಪ್ರತಿವಾದಿ ಇಂದ್ರೇಶ್ ರವರ ತಾತ ಮಂಜೇಗೌಡರವರಿಗೆ ಸ.ನಂ.40 ರಲ್ಲಿ 2 ಎಕರೆ 30 ಗುಂಟೆ ಬಂದಿದೆ ಎಂದರೆ? ನನಗೆ ಗೊತ್ತಿಲ್ಲ.

23. ಸ.ನಂ.40 ರಲ್ಲಿ ಯಾರು ಯಾರಿಗೆ ಎಷ್ಟು ಎಷ್ಟು ಭಾಗ ಇದೆ ಎಂದರೆ? ಅಶೋಕ ಮತ್ತು ಸುರೇಂದ್ರ ರವರಿಗೆ 3 ಎಕರೆ 16 ಗುಂಟೆ, ಇದ್ರೇಶ್ ರವರಿಗೆ 1 ಎಕರೆ, ನಮಗೆ 6 ಎಕರೆ 23 ಗುಂಟೆ ಬಂದಿದೆ.

24. ಹಳೇ ಪಹಣಿಗಳಲ್ಲಿ ನಿಮಗೆ 5 ಎಕರೆ 20 ಗುಂಟೆ ಇದೆ ಎಂದರೆ ಸರಿಯಲ್ಲ. ಸ.ನಂ.40 ಕ್ಕೆ ಸಂಬಂಧಪಟ್ಟ ಹಳೇ ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ. ಆದರೆ ಪ್ರಯತ್ನ ಕೂಡ ಮಾಡಿಲ್ಲ.

25. 3 ನೇ ಪ್ರತಿವಾದಿ ಇಂದ್ರೇಶ್ ರವರ ತಂದೆ ಸುಬ್ಬೇಗೌಡರವರು ಸುಬ್ಬಮ್ಮ ಕೋಂ ಕೆಂಚೇಗೌಡರವರಿಗೆ 2 ಎಕರೆ 30 ಗುಂಟೆ ಅವರ ಪಾಲನ್ನು ಅಡಮಾನ ಮಾಡಿದ್ದರು ಎಂದರೆ?

ಗೊತ್ತಿಲ್ಲ.

26. ಈಗಲೂ ಸಹಾ ಇಂದ್ರೇಶ್ ರವರು 2 ಎಕರೆ 30 ಗುಂಟೆಯಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

27. AC ಕೋರ್ಟ್ ನ ಆದೇಶದ ಮೇಲೆ DC ಕೋರ್ಟ ಗೆ ಅಪೀಲು ಸಲ್ಲಿಸಿದ್ದಾರೆ ಎಂದರೆ ಸರಿ.

28. ಪಹಣಿಯಲ್ಲಿ ತಪ್ಪಾಗಿರುವುದನ್ನು ದುರುಪಯೋಗಪಡಿಸಿಕೊಂಡು ಈ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ.

29. ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.